**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ .5493/2021**

| | | | |
|---|---|---|---|
| **ಸಾಕ್ಷಿದಾರರ ಹೆಸರು** | - ನಂದೀಶ್ ಬಿ ಬಿ | | **ಚಾ.ಸಾ.-5** |
| **ತಂದೆಯ ಹೆಸರು** | - ಬೋರಯ್ಯ | | **ಪ್ರಾ.ಸಾ.-3** |
| **ವಯಸ್ಸು** | - 30 ವರ್ಷ | | |
| **ಉದ್ಯೋಗ** | - ವ್ಯವಸಾಯ | | |
| **ವಾಸಸ್ಥಳ** | - ಬೋರಾಪುರ | | |

ದಿನಾಂಕಃ 26-11-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ**

ಚಾಸಾ-1 ರಿಂದ 4 ರವರ ಪರಿಚಯವಿರುತ್ತದೆ. ಆರೋಪಿಯ ಪರಿಚಯವಿರುತ್ತದೆ ದಿ ನಮ್ಮ ಗ್ರಾಮಸ್ಥರು. ನನಗೆ ಈ ಪ್ರಕರಣದ ಬಗ್ಗೆ ಏನು ಗೊತ್ತಿಲ್ಲ . ಈ ಬಗ್ಗೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ-**

ನಿಮ್ಮ ಗ್ರಾಮದ ಸಿದ್ದಯ್ಯ ರವರಿಗೆ ಚಾಸಾ-1 ಮತ್ತು ಆರೋಪಿ 1 ರವರು ಹೆಂಡತಿಯರು ಎಂದರೆ ಸರಿ. ಚಾಸಾ-1 ರವರಿಗೆ ಇಬ್ಬರು ಮಕ್ಕಳಿದ್ದು, ಚಾಸಾ-2 ಮತ್ತು ಮೃತ ಶಿವಲಿಂಗ ಎಂದರೆ ಸರಿ. ದಿ 16-12-2011 ರಂದು ಸಿದ್ದಯ್ಯ ರವರು ತೀರಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. , ಅವರ ಜೀವಿತಾವದಿಯಲ್ಲಿ ಬೋರಾಪುರ ಗ್ರಾಮದಲ್ಲಿದ್ದ ಅವರ ಜಮೀನನ್ನು ಅವರು ಯಾರಿಗೂ ವಿಲ್ ಬರೆದಿಲ್ಲ ಮತ್ತು ಭಾಗ ಮಾಡಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆರೋಪಿ 1 ರಿಂ 6 ರವರು ಅಕ್ರಮವಾಗಿ ಗುಂಪುಕಟ್ಟಿಕೊಂಡು ಆರೋಪಿ 7, 8, 15, 16 ರವರ ಜೊತೆ ಶರೀಕಾಗಿ ಸುಳ್ಳು ಒಪ್ಪಿಗೆ ಪತ್ರವನ್ನು ಸೃಷ್ಟಿ ಮಾಡಿಕೊಂಡು ಆರೋಪಿತರ ಹೆಸರಿಗೆ ಅಕ್ರಮವಾಗಿ ಸದರಿ ಸಿದ್ದಯ್ಯ ರವರ ಹೆಸರಿನಲ್ಲಿದ್ದ ಖಾತೆಗಳನ್ನು ಬದಲಾವಣೆ ಮಾಡಿಕೊಂಡಿದ್ದಾರೆಂದರೆ ಸರಿಯಲ್ಲ.

ಸದರಿ ದಾಖಲೆಗಳನ್ನು ಬದಲಾವಣೆ ಮಾಡಿ, ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಚಾಸಾ-1 ರವರ ನಕಲಿ ಹೆಬ್ಬೆಟ್ಟಿನ ಗುರುತನ್ನು ಪಡೆದು ಆರೋಪಿ 7, 5, 16, 17 ರವರು ಅಕ್ರಮವಾಗಿ ಚಾಸಾ-1 ರವರಿಗೆ ವಂಚಿಸುವ ಕಾರಣದಿಂದ ಆರೋಪಿ 1 ರಿಂದ 6 ರವರ ಜೊತೆ ಶಾಮೀಲಾಗಿ ಆರೋಪಿ 1 ರವರ ಹೆಸರಿಗೆ ಖಾತೆ ಬದಲಾವಣೆ ಮಾಡಿ ಅಕ್ರಮವಾಗಿ ದಾಖಲೆಗಳನ್ನು ಸೃಷ್ಟಿಸಿರುತ್ತಾರೆಂದರೆ ಸರಿಯಲ್ಲ.

ಸದರಿ ಗಲಾಟೆಯ ಹಿನ್ನಲೆಯಲ್ಲಿ ಚಾಸಾ-1 ಮದ್ದೂರು ಪೋಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೀರಿ ಎಂದರೆ ಸರಿಯಲ್ಲ.

ನಂತರ ದಿ 22-02-2016 ರಂದು ಈ ಬಗ್ಗೆ ಪೊಲೀಸರಿಗೆ ನೀವು ಹೇಳಿಕೆಯನ್ನು ನೀಡಿರುತ್ತೀರಿ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ಸಾಕ್ಷಿಯು ಒಪ್ಪದ ಕಾರಣ, ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು.

ನಿಮಗೆ ಪ್ರಕರಣದ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ಎಲ್ಲಾ ವಿಚಾರಗಳು ಗೊತ್ತಿದ್ದರೂ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಮಾನ್ಯ ಶ್ರೀ.ಎಂಕೆ ವಕೀಲರಿಂದಃ-**

ಏನು ಇಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ ಮತ್ತು ಜೆ ಎಂ ಎಫ್ ಸಿ , ಮದ್ದೂರು.